ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1302(1755)**
ಸದಸ್ಯರ ಹೆಸರು **ಶ್ರೀ ಪಾಟಾಳ್ ನಾಗರಾಜ್(ಚಾಮರಾಜನಗರ)**
ಉತ್ತರಿಸುವ ಸಚಿವರು **ಶ್ರೀ ಶಶಿಕಾಂತ ಆ ನಾಯಕ**
(ತೋಟಗಾರಿಕೆ ಸಚಿವರು)

ಅ) ರಾಜ್ಯದಲ್ಲಿರುವ ತೆಂಗಿನ ಮರಗಳ ಒಟ್ಟು ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು),

ರಾಜ್ಯದಲ್ಲಿರುವ ತೆಂಗಿನ ಮರಗಳ ಒಟ್ಟು ಸಂಖ್ಯೆ ಅಂದಾಜು 604 95 ಲಕ್ಷ ಜಿಲ್ಲಾವಾರು ಮಾಹಿತಿ ಈ ಕೆಳಕಂಡಂತಿದೆ

ಕ್ರಮ ಸಂಖ್ಯೆ	ಜಿಲ್ಲೆ	ಒಟ್ಟು ತೆಂಗಿನ ಮರಗಳ ಸಂಖ್ಯೆ (ಲಕ್ಷಗಳಲ್ಲಿ)
1	ತುಮಕೂರು	158 96
2	ಹಾಸನ	80 43
3	ಚಿತ್ರದುರ್ಗ	70 00
4	ಮಂಡ್ಯ	45 17
5	ಬೆಂಗಳೂರು (ಗ್ರಾ)	39 00
6	ಚಿಕ್ಕಮಗಳೂರು	37 17
7	ಮೈಸೂರು	27 90
8	ದಕ್ಷಿಣ ಕನ್ನಡ	21 54
9	ಉಡುಪಿ	21 39
10	ದಾವಣಗೆರೆ	20 56
11	ಕೋಲಾರ	18 12
12	ಬೆಂಗಳೂರು ನಗರ	11 91
13	ಚಾಮರಾಜನಗರ	11 35
14	ಶಿವಮೊಗ್ಗ	9 41
15	ಉತ್ತರ ಕನ್ನಡ	8 47
16	ಬೆಳಗಾಂ	4 46
17	ಹಾವೇರಿ	4 42
18	ಬಳ್ಳಾರಿ	2 45
19	ಗದಗ	2 24
20	ರಾಯಚೂರು	2 08
21	ಬಾಗಲಕೋಟೆ	1 81
22	ಕೊಪ್ಪಳ	1 79
23	ಕೊಡಗು	1 65
24	ಗುಲ್ಬರ್ಗಾ	1 14
25	ಬಿಜಾಪುರ	0 84
26	ಧಾರವಾಡ	0 57
27	ಬೀದರ್	0 03
ಒಟ್ಟು		**604 95**

ಆ) ಯಾವ ಜಿಲ್ಲೆಗಳಲ್ಲಿ ತೆಂಗನ್ನು ಹೆಚ್ಚು ಬೆಳೆಯಲಾಗುತ್ತಿದೆ,

ತೆಂಗನ್ನು ತುಮಕೂರು, ಹಾಸನ, ಚಿತ್ರದುರ್ಗ, ಮಂಡ್ಯ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಹೆಚ್ಚಾಗಿ ಬೆಳೆಯಲಾಗುತ್ತಿದೆ

ಇ) ಕಳೆದ ನಾಲ್ಕು ವರ್ಷಗಳಿಂದ ತೆಂಗಿನ ಯಾವ ರೋಗ ಕಾಡಲಾರಂಬಿಸಿದೆ, ಈ ರೋಗದ ನಿಯಂತ್ರಣಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಕಳೆದ ನಾಲ್ಕು ವರ್ಷಗಳಿಂದ ತೆಂಗಿನ ಮರಗಳಿಗೆ ಕಪ್ಪು ತಲೆ ಹುಳು, ನುಸಿ, ಕಾಂಡ ಸೋರುವ ರೋಗ, ಅಣಬೆ ರೋಗ, ಸುಳಿ ಕೊಳ ರೋಗ ಹಾಗೂ ಬೇರು ಸೊರಗು ರೋಗ ಕಾಡಲಾರಂಬಿಸಿವೆ

ಈ ರೋಗಗಳ ನಿಯಂತ್ರಣಕ್ಕೆ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ

1) ತೆಂಗಿನ ನುಸಿ ಭಾದೆ ನಿವಾರಣೆಗಾಗಿ ಜೈವಿಕ ಕೀಟ ನಾಶಕಗಳ ಬಳಕೆ ಮತ್ತು ಪೌಷ್ಟಿಕಾಂಶ ಸರಬರಾಜು ಕುರಿತಂತೆ ರೈತರ ತೋಟಗಳಲ್ಲಿ ಸರ್ಕಾರಿ ವೆಚ್ಚದಲ್ಲಿ ವಿಸ್ತೃತ ಪ್ರದೇಶದಲ್ಲಿ ಪ್ರಾತ್ಯಕ್ಷತೆಯನ್ನು ಕೈಗೂಳ್ಳಲಾಗುತ್ತಿದೆ

2) ತೆಂಗಿನ ಬೆಳೆಯೂ ಸೇರಿದಂತೆ ಎಲ್ಲಾ ತೋಟಗಾರಿಕೆ ಬೆಳೆಗಳಿಗೆ ಶೇ 50ರ ರಿಯಾಯಿತಿ ದರದಲ್ಲಿ ಸಸ್ಯ ಸಂರಕ್ಷಣ ಔಷಧಿಗಳನ್ನು ರೈತರಿಗೆ ನೀಡಲಾಗುತ್ತಿದೆ

3) ತೆಂಗಿನ ತೋಟಗಳಲ್ಲಿ ಸಾವಯವ ಕೃಷಿ ಕೈಗೊಂಡು ಮರಗಳ ಆರೋಗ್ಯಸುಧಾರಣೆಗಾಗಿ ಸಾವಯವ ಗೊಬ್ಬರವನ್ನು ಬಳಸಲು ತೆಂಗು ಬೆಳೆಗಾರರಿಗೆ ಪ್ರೋತ್ಸಾಹ ನೀಡಲಾಗುತ್ತಿದೆ

4) ಕಪ್ಪು ತಲೆ ಹುಳುವಿನ ನಿಯಂತ್ರಣಕ್ಕಾಗಿ ಪರೋಪ ಜೀವಿಗಳನ್ನು ಪ್ರಯೋಗಾಲಯದಲ್ಲಿ ಉತ್ಪಾದಿಸಿ ಉಚಿತವಾಗಿ ನೀಡಲಾಗುತ್ತಿದೆ

5) ತೆಂಗು ಬೇರು ಸೊರಗು ರೋಗ ತಗಲಿರುವ ಮರಗಳನ್ನು ಕಡಿದು ಹಾಕುವ ಪ್ರತಿ ಮರಕ್ಕೆ ರೂ 250 ರಂತೆ ಸಹಾಯಧನವನ್ನು ನೀಡಲಾಗುತ್ತಿದೆ

6) ತೆಂಗಿನ ಮರಗಳನ್ನು ಭಾದಿಸುವ ಕೀಟ ಮತ್ತು ರೋಗಗಳ ನಿರ್ವಹಣೆಗಾಗಿ ತಾಂತ್ರಿಕತೆ, ಹಸ್ತಪ್ರತಿ, ಕಿರುಪುಸ್ತಕ, ವಿಚಾರ ಸಂಕಿರಣ, ತರಬೇತಿ, ಇತ್ಯಾದಿ ವಿಸ್ತರಣಾ ಕಾರ್ಯಕ್ರಮಗಳು ಹಾಗೂ ಆಕಾಶವಾಣಿ, ದೂರದರ್ಶನ ಮಾಧ್ಯಮಗಳ ಮೂಲಕ ರೈತರಿಗೆ ತಲುಪಿಸಲಾಗುತ್ತಿದೆ